◆ **ನಿಮ್ಮ ಆಲೋಚನೆಗಳನ್ನು ರೂಪಿಸಿದ ಬಾಲ್ಯ ಹೇಗಿತ್ತು? ಓದು ಬರಹಗಳ ಆಸಕ್ತಿಯನ್ನು ಪೋಷಿಸಿದ ಸಂಗತಿಗಳು ಯಾವುವು?**

ನನ್ನ ಅಜ್ಜಿ ಮತ್ತು ತಾಯಿ ನನ್ನ ಆಲೋಚನೆಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಅಜ್ಜಿ ರಾಮಾಯಣ, ಮಹಾಭಾರತದ ಕಥೆಗಳನ್ನು ಹೇಳುತ್ತಿದ್ದರು. ಕೊಲ್ಲಾಪುರದವರಾಗಿದ್ದ ನನ್ನ ತಾಯಿಯವರು ಸ್ವಾತಂತ್ರ್ಯ ಹೋರಾಟ ನಡೆಸಿದ, ಸ್ತ್ರೀ ಸುಧಾರಣೆಗಾಗಿ ಹೋರಾಡಿದ ಕರ್ವೆ, ಗೋಖಲೆ, ಟಿಳಕ ಇತ್ಯಾದಿ ಗಣ್ಯರ ಕಥೆಗಳನ್ನು ಹೇಳುತ್ತಿದ್ದರು. ಮಹಾರಾಷ್ಟ್ರ ಮತ್ತು ಬಂಗಾಳದಲ್ಲಿ ಇಂತಹ ಹೋರಾಟದಲ್ಲಿ ತೊಡಗಿದ ಹೆಣ್ಣುಮಕ್ಕಳಿದ್ದರು. ನಮ್ಮ ಕಡೆ ತಮ್ಮ ಗಂಡಸರನ್ನು ಅನುಸರಿಸಿಕೊಂಡು ಹೋಗುವ ಹೆಣ್ಣುಮಕ್ಕಳೇ ಹೆಚ್ಚು. ಬಹಳ ಚಿಕ್ಕವಳಿದ್ದಾಗಲೇ ನಾನು ಮರಾಠಿ ಸಾಹಿತ್ಯ ಓದಲಿಕ್ಕೆ ಶುರು ಮಾಡಿದ್ದೆ. ಪ್ರಗತಿಪರವಾಗಿ ಯೋಚಿಸುವ ಪ್ರೇರಣೆ ಅಲ್ಲಿಂದಲೇ ಒದಗಿತು. ಮರಾಠಿ ಪ್ರಗತಿಪರ ಸಾಹಿತ್ಯವನ್ನು ತಾಯಿಯ ಜೊತೆಗೇ ಓದುತ್ತಿದ್ದೆ.

ನನ್ನ ತಾಯಿಯ ತಂದೆಯವರು ಕೊಲ್ಲಾಪುರ ಮಹಾರಾಜರ ಗುರುಗಳ ಬಳಿ ದಿವಾನರಾಗಿದ್ದರು. ಮುಂಬೈನಲ್ಲಿ ಅವರಿಗೆ ಸಂಬಂಧಿಸಿದ ಕೇಸ್‌ಗಳನ್ನು ನಡೆಸುತ್ತಿದ್ದರು. ಅವರೂ ಸಹ ವಿಶಾಲ ಮನೋಭಾವದವರಾಗಿದ್ದರು. ತಮ್ಮ ಮಗಳನ್ನು ಅದೇ ವಾತಾವರಣದಲ್ಲಿ ಬೆಳೆಸಿದ್ದರು. ಅಂದಿನ ಕಾಲದಲ್ಲಿ ಹೆಣ್ಣುಮಕ್ಕಳಿಗೆ ಹನ್ನೆರಡು-ಹದಿಮೂರು ವರ್ಷಗಳಿಗೇ ಮದುವೆ ಮಾಡುವ ಪದ್ಧತಿಯಿದ್ದರೂ ಇವರು ಮಾತ್ರ

